ಅಧಿಸೂಚನೆ ಹೊರಡಿಸಲಾಗಿದೆ. ಈ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 18–08–2011 ರಂದು ಪ್ರಕಟಗೊಂಡಿರುತ್ತದೆ. ವಿಜಯ ಕರ್ನಾಟಕ ಮತ್ತು ಸಂಯುಕ್ತ ಕರ್ನಾಟಕ ದಿನ ಪತ್ರಿಕೆಗಳಲ್ಲಿ ದಿನಾಂಕ: 26–11–2011 ರಂದು ಪ್ರಕಟವಾಗಿರುತ್ತದೆ. ಸ್ಥಳೀಯ ಕಛೇರಿಗಳಲ್ಲಿಯೂ ಸಹ ಪ್ರಕಟಿಸಿ ಅಧಿಸೂಚನೆಯ ಪತ್ರಿಯನ್ನು ಎಲ್ಲಾ ಭೂಮಾಲೀಕರಿಗೂ ಸಹ ಜಾರಿ ಮಾಡಲಾಗಿದೆ. ಸದರಿ ಪ್ರಾಥಮಿಕ ಅಧಿಸೂಚನೆಗೆ ಸಂಬಂಧಿಸಿದಂತೆ ಇದುವರೆವಿಗೂ 16 ಜನರಿಂದ ಆಕ್ಷೇಪಣೆ ಅರ್ಜಿಗಳು ಸ್ವೀಕೃತವಾಗಿರುತ್ತವೆ. ಆ ಎಲ್ಲಾ ಆಕ್ಷೇಪಣಾ ಅರ್ಜಿಗಳ ಬಗ್ಗೆ, ಭೂಸ್ವಾಧೀನ ಕಾಯ್ದೆ ಕಲಂ 5(ಎ) ರಡಿಯಲ್ಲಿ ಅವರುಗಳಿಗೆ ನೋಟೀಸ್ ನೀಡಿ ವಿಚಾರಣೆ ನಡೆಸುವ ಹಂತದ ಲ್ಲಿರುತ್ತದೆ. ವಿಚಾರಣಾ ಸಮಯದಲ್ಲಿ, ಎಲ್ಲಾ ಸಂಬಂಧಿತ ಅಂಶಗಳನ್ನು ಪರಿಶೀಲಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

2) ವಿಷಯ: **ಸಕಲೇಶಪುರ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಏಲಕ್ಕಿ ಬೆಳೆ ನಾಶವಾಗಿದ್ದು, ಈ ಬೆಳೆಗಾರರ ಸಾಲವನ್ನು ಸಂಪೂರ್ಣ ಮನ್ನಾ ಮಾಡುವ ಬಗ್ಗೆ**

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ) : ಮಾನ್ಯ ಸಭಾಧ್ಯಕ್ಷರೆ, ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕು ಮತ್ತು ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಏಲಕ್ಕಿ ಬೆಳೆಗೆ ಕೊಕ್ಕೆಕಂದು ಮತ್ತು ಕಚ್ಚೆರೋಗ ತಗುಲಿ ಬೆಳೆ ನಾಶವಾಗಿದ್ದು, ಈ ಬೆಳಗಾರರ ಸಂಪೂರ್ಣ ಸಾಲ ಮನ್ನಾ ಮಾಡುವ ಬಗ್ಗೆ ಮಾನ್ಯ ತೋಟಗಾರಿಕಾ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಹಾಗೂ ತೋಟಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ,

ರಾಜ್ಯದ ಕೊಡಗು, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳ ಪೈಕಿ ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನಿಂದ ಮಾತ್ರ ಏಲಕ್ಕಿ ಬೆಳೆಗೆ ಸಾಲ ನೀಡಲಾಗಿದೆ. ಫೆಬ್ರವರಿ 2012 ರ ಅಂತ್ಯಕ್ಕೆ 800 ಸದಸ್ಯರಿಂದ ರೂ.352.23 ಲಕ್ಷಗಳ ಹೊರಬಾಕಿ ಇರುತ್ತದೆ. ಈ ಪೈಕಿ 20 ಸದಸ್ಯರಿಂದ ರೂ.10.70 ಲಕ್ಷಗಳ ಸಾಲ ಮಾತ್ರ ಸುಸ್ತಿಯಾಗಿರುತ್ತವೆ.

ಕೊಡಗು ಪಿಕಾರ್ಡ್ ಬ್ಯಾಂಕಿನಲ್ಲಿ 489 ರೈತರಿಂದ ರೂ.91.04 ಲಕ್ಷ ಹೊರಬಾಕಿ ಇದ್ದು, 22 ರೈತರಿಂದ ರೂ.2.99 ಲಕ್ಷ ಸುಸ್ತಿಯಾಗಿರುತ್ತದೆ.

ಚಿಕ್ಕಮಗಳೂರು ಪಿಕಾರ್ಡ್ ಬ್ಯಾಂಕಿನಲ್ಲಿ 645 ರೈತರಿಂದ ರೂ. 343.68 ಲಕ್ಷ ಹೊರಬಾಕಿ ಇದ್ದು, 367 ರೈತರಿಂದ ರೂ. 38.68 ಲಕ್ಷ ಸುಸ್ತಿಯಾಗಿರುತ್ತದೆ.

ಹಾಸನ ಪಿಕಾರ್ಡ್ ಬ್ಯಾಂಕಿನಲ್ಲಿ 495 ರೈತರಿಂದ ರೂ. 375.35 ಲಕ್ಷ ಹೊರಬಾಕಿ ಇದ್ದು, 176 ರೈತರಿಂದ ರೂ. 39.74 ಲಕ್ಷ ಸುಸ್ತಿಯಾ ಗಿರುತ್ತದೆ.

ಏಲಕ್ಕಿ ಬೆಳೆಗಾರರ ಸಾಲ ಮನ್ನಾ ಪ್ರಸ್ತಾವವು ಸರ್ಕಾರದ ಮುಂದೆ ಇರುವುದಿಲ್ಲ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಏಲಕ್ಕಿ ಬೆಳೆಗೆ ಸಂಬಂಧಪಟ್ಟ ಈ ವಿಷಯವನ್ನು ನಾವು ಕಳೆದ ಅಧಿವೇಶನದಲ್ಲಿ ಕೂಡ ತಂದಿದ್ದೆವು. ಆಗ ಮಾನ್ಯ ಮುಖ್ಯಮಂತ್ರಿಗಳು ಈ ವಿಷಯವನ್ನು ಪರಿಶೀಲಿಸಿ ಸಾಲ ಮನ್ನಾ ಮಾಡುವ ಬಗ್ಗೆ ಮತ್ತು ಇತರ ವಿಚಾರಗಳ ಬಗ್ಗೆ ದೆಹಲಿಗೆ ನಿಯೋಗವನ್ನು ಕೊಂಡೊಯ್ಯುತ್ತೇವೆ ಮತ್ತು ರೈತರಿಗೆ ಸಹಾಯ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದರು. ಈಗ ಪುನಃ ನಾವು ಈ ವಿಷಯವನ್ನು ತಂದಿದ್ದೇವೆ. ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಒಂದು ಸಮಿತಿ ಮಾಡಿದ್ದರು. ಸಕಲೇಶ ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಕೊಡಗು ಜಿಲ್ಲೆ, ಶಿವಮೊಗ್ಗ ಜಿಲ್ಲೆಗಳಲ್ಲಿ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಏಲಕ್ಕಿ ಬೆಳೆಗಾರರಿಗೆ ಹಾನಿಯಾಗಿದ್ದು, ಸುಮಾರು 11 ಕೋಟಿ ರೂಪಾಯಿ ಸಾಲವಿದೆ. ಅದನ್ನು ಮನ್ನಾ ಮಾಡಬೇಕೆಂದು ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ರಚಿಸಿದ್ದಂಥ ಸಮಿತಿ ಕೂಡ ಹೇಳಿದೆ. ಅವರು ಮಾಡಿರುವ ಶಿಫಾರಸ್ಸಿನ ಒಂದು sentence ಓದುತ್ತೇನೆ. "As it is known that viral diseases are the major bottlenecks in the crop productivity in Cardamom, it is practically impossible to get good crop yield in spite of improved packages and financial support and technical advise provided by the Government and other agencies. In the light of this, hence, the Committee is of the opinion that the farmers request for waiving up of loan taken for cultivation of

cardamom may sympathetically be considered in line with coffee growers." ಕಾಫಿ ಬೆಳೆಗಾರರಿಗೆ ಹೇಗೆ ಸಾಲ ಮನ್ನಾ ಮಾಡಿದ್ದೀರಿ, ಅದೇ ರೀತಿಯಲ್ಲಿ ಇವರಿಗೂ ಸಾಲ ಮನ್ನಾ ಮಾಡಬೇಕೆಂಬ ಶಿಫಾರಸ್ಸನ್ನು ಮಾಡಿದ್ದಾರೆ. ಕೊಕ್ಕೆಕಂದು ಮತ್ತು ಕಚ್ಚೆ ರೋಗದಿಂದ ಬೆಳೆ ಹಾನಿಯಾಗಿರುವುದು ತಮಗೂ ಅನುಭವವಾಗಿದೆ. ತಮ್ಮ ಕ್ಷೇತ್ರದಲ್ಲೂ ಈ ಸ್ಥಿತಿ ಇದೆ. ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ದಯಮಾಡಿ ಏಲಕ್ಕಿ ಬೆಳೆಗಾರರ ಸಾಲವನ್ನು ಮನ್ನಾ ಮಾಡಬೇಕು. ಅದೇನು ನೂರಾರು ಕೋಟಿ ಅಥವಾ ಸಾವಿರಾರು ಕೋಟಿ ರೂಪಾಯಿಗಳಿಲ್ಲ, 11 ಕೋಟಿ ರೂಪಾಯಿ ಅಷ್ಟೇ ಇದೆ. ಅದನ್ನು ಮನ್ನಾ ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಏಲಕ್ಕಿ ಬೆಳೆಗಾರರ ಸಾಲ ಮನ್ನಾ ಮಾಡಿ ಎಂದು ಹಿಂದೆ ಮುಖ್ಯಮಂತ್ರಿಗಳೇ ಪತ್ರ ಬರೆದಿರುವುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಅದನ್ನು ಪರಿಶೀಲನೆ ಮಾಡಿ, ಸಾಲ ಮನ್ನಾ ಮಾಡುತ್ತೇನೆ ಎಂದು ಕಳೆದ ಬಾರಿ ಹೇಳಿದ್ದರು. ಕೊಡಗು, ಚಿಕ್ಕಮಗಳೂರು, ಹಾಸನ ಜಿಲ್ಲೆಗಳು ಸೇರಿ ಈ ಸಾಲ ಬರೀ 9 ಕೋಟಿ ಇದೆ ಅಷ್ಟೇ. ಆದ್ದರಿಂದ ಅದನ್ನು ಮನ್ನಾ ಮಾಡಬೇಕೆಂದು ಕೋರುತ್ತೇನೆ. ಯಾರ್ಯಾರೋ ಮಠಗಳವರೆಲ್ಲ ತಿನ್ನುತ್ತಿದ್ದಾರೆ, ಇವರು ಪಾಪ ಬೆಳೆಗಾರರು ತಿಂದುಕೊಳ್ಳಲಿ. ಮನ್ನಾ ಮಾಡುತ್ತೇವೆ ಎಂದು ಒಂದು ಸಾರಿ ತೋಟಗಾರಿಕಾ ಮಂತ್ರಿಗಳು ದಯಮಾಡಿ ಅನೌನ್ಸ್ ಮಾಡಿಬಿಡಿ. ನಿಮಗೆ ಒಳ್ಳೆಯದಾಗುತ್ತದೆ.

ಶ್ರೀ ಎಸ್.ಎ. ರವೀಂದ್ರನಾಥ್ : ಆ ಭಾಗಗಳಲ್ಲಿ ಏಲಕ್ಕಿ ಬೆಳೆ ಶೇಕಡಾ 60 ರಷ್ಟು ಹಾನಿಯಾಗಿದೆ. ಇದಕ್ಕೆ ಪರಿಹಾರ ಕೊಡುವುದು ನಮಗೆ ಬರುವುದಿಲ್ಲ, ರೆವಿನ್ಯೂ ಇಲಾಖೆಗೆ ಬರುತ್ತದೆ. ಇದನ್ನು ರೆವಿನ್ಯೂ ಇಲಾಖೆಯವರಿಗೆ ಹೇಳಿ, ಈ ಬೆಳೆಗಾರರಿಗೆ ಏನೇನು ಕೊಡಬಹುದು ಅದನ್ನು ಕೊಡಿಸುವಂಥ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ನಾವು ಒತ್ತಾಯ ಮಾಡುತ್ತಿರುವುದು ಸಾಲ ಮನ್ನಾ ಮಾಡಲು, ಇದರಲ್ಲಿ ಪರಿಹಾರ ಏನು ಸಿಗುತ್ತದೆ? ಸಾಲ ಇರುವುದು ಕೇವಲ 11 ಕೋಟಿ. ಒಂದು ಲಕ್ಷ ಜನ ರೈತರಿದ್ದಾರೆ. ಮಠ ಮಾನ್ಯಗಳಿಗೆ 381 ಕೋಟಿ ದುಡ್ಡು ಕೊಟ್ಟಿದ್ದೀರಿ. ರೈತರ 11 ಕೋಟಿ ಸಾಲವನ್ನು ಮನ್ನಾ ಮಾಡುವುದಕ್ಕೆ ಆಗುವುದಿಲ್ಲವೇ? ರೈತರ ಸಾಲ ಮನ್ನಾ ಮಾಡಿದರೆ ನಿಜವಾಗಿ ರೈತರಿಗೆ ದುಡ್ಡು ಕೊಟ್ಟಹಾಗೆ. ರೈತರೇ ದೇವರಲ್ಲವೇ?